ಅನುದಾನ ಲಭ್ಯತೆಯನ್ನು ಆಧರಿಸಿ, ಅಗತ್ಯತೆಗನುಗುಣವಾಗಿ ಉಳಿದ ಪದವಿ ಪೂರ್ವ ಕಾಲೇಜುಗಳಲ್ಲಿ ವಾಣಿಜ್ಯ ಸಂಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ಕ್ರಮಕೈಗೊಳ್ಳಲಾಗುವುದು.

ಉಪನ್ಯಾಸಕರುಗಳನ್ನು ಮಾತೃ ಇಲಾಖೆಗೆ ಕಳುಹಿಸುವುದು

267 (563) ಶ್ರೀ ಪ್ರಕಾಶ್ ಹೆಚ್.ಎಸ್. (ಹಾಸನ):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದ ಪದವಿ ಪೂರ್ವ ಕಾಲೇಜು ಉಪನ್ಯಾಸಕರುಗಳು ಸಮಾಜ ಕಲ್ಯಾಣ ಇಲಾಖೆಯಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಉಪನ್ಯಾಸಕರುಗಳನ್ನು ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಮಾತೃ ಇಲಾಖೆಗೆ ಬಿಡುಗಡೆಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

(ಅ) ಬಂದಿದೆ.

(ಆ) ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು ಹಾಗೂ ಪ್ರಾಥಮಿಕ ಶಾಲಾ ಮತ್ತು ಪ್ರೌಢ ಶಾಲಾ ಸಹಶಿಕ್ಷಕರನ್ನು ಬೋಧಕೇತರ ಕಾರ್ಯಗಳಿಗಾಗಿ ನಿಯೋಜಿಸಬಾರದೆಂದು ಸುತ್ತೋಲೆ ಸಂಖ್ಯೆ: ಇಡಿ 300 ಡಿಜಿಡಿ 2011 ದಿನಾಂಕ: 08–11–2011 ರಂದು ಹೊರಡಿಸಿದೆ. ಅದರಂತೆ, ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಅನ್ಯ ಇಲಾಖೆಗೆ ನಿಯೋಜನೆ/ಎರವಲು ಸೇವೆಯಲ್ಲಿರುವ ಉಪನ್ಯಾಸಕರುಗಳನ್ನು ಮಾತೃ ಇಲಾಖೆಗೆ ಹಿಂಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

219 (167) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) ಮಾನ್ಯ ಸಹಕಾರ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯ ಸರ್ಕಾರವು ರೈತರಿಗೆ ಶೇ.2 ಮತ್ತು ಶೇ.1ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯಡಿಯಲ್ಲಿ ಕಳೆದ 3 ವರ್ಷಗಳಿಂದ ಇಲ್ಲಿಯವರೆವಿಗೆ ಎಷ್ಟು ಜನರಿಗೆ ಅನುಕೂಲ ಮಾಡಿಕೊಟ್ಟಿದೆ; ಈ ಯೋಜನೆಯಡಿಯಲ್ಲಿ ನೀಡಲಾಗುವ ಗರಿಷ್ಠ ಮೊತ್ತದ ಸಾಲವೆಷ್ಟು?

(ಆ) ಮೇಲ್ಕಂಡ ಅವಧಿಯಲ್ಲಿ ರಾಜ್ಯದ ಪ್ರತಿ ಜಿಲ್ಲೆಗಳಲ್ಲಿ ಯೋಜನೆಯ ಲಾಭ ಪಡೆದ ರೈತರ ಸಂಖ್ಯೆ ಎಷ್ಟು; ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಭಾಲ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ರೈತರು ಈ ಯೋಜನೆಯ ಲಾಭ ಪಡೆದುಕೊಂಡಿದ್ದಾರೆ. (ವಿವರ ಒದಗಿಸುವುದು)

(ಇ) ಈ ಯೋಜನೆಯ ಅನುಷ್ಠಾನಕ್ಕಾಗಿ ಮೇಲ್ಕಂಡ ಅವಧಿಯಲ್ಲಿ ರಾಜ್ಯ ಸರ್ಕಾರ ಮತ್ತು ಅಪೆಕ್ಸ್ ಬ್ಯಾಂಕ್ ಎಷ್ಟು ಹಣವನ್ನು ವೆಚ್ಚ ಮಾಡಿವೆ/ ಪ್ರಸಕ್ತ ಸಾಲಿನಲ್ಲಿ ರೈತರಿಗೆ ಬಡ್ಡಿ ರಹಿತವಾಗಿ ಸಾಲ ನೀಡಿಕೆ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ; ಹಾಗಿದ್ದಲ್ಲಿ ಈ ಯೋಜನೆ ಜಾರಿಯಾದಾಗಿನಿಂದ ಇಲ್ಲಿಯವರೆಗೆ ವಿವಿಧ ಜಿಲ್ಲೆಯ ಎಷ್ಟು ರೈತರು ಇದರ ಲಾಭ ಪಡೆದುಕೊಂಡಿದ್ದಾರೆ; ಈ ಯೋಜನೆಯಿಂದ ಸರ್ಕಾರಕ್ಕೆ ಮತ್ತು ಅಪೆಕ್ಸ್ ಬ್ಯಾಂಕಿಗೆ ಎಷ್ಟು ಹಣ ವೆಚ್ಚವಾಗುತ್ತದೆ? ವಿವರ ನೀಡುವುದು.

ಶ್ರೀ ಬಿ.ಜೆ ಪುಟ್ಟಸ್ವಾಮಿ (ಮಾನ್ಯ ಸಹಕಾರ ಸಚಿವರು)

(ಅ) ರಾಜ್ಯದ ರೈತರಿಗೆ ಶೇಕಡಾ 2ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯು ಜಾರಿಯಲ್ಲಿರುವುದಿಲ್ಲ. ರಾಜ್ಯ ಸರ್ಕಾರವು ರೈತರಿಗೆ ಶೇ. 1ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು 2011–12ನೇ ಸಾಲಿನಿಂದ ಜಾರಿಗೆ ತಂದಿರುತ್ತದೆ. ಈ ಯೋಜನೆಯನ್ನು 2010–11 ರಲ್ಲಿ ಸಾಲ ವಿತರಿಸಿ ದಿ: 31–03–2011ಕ್ಕೆ ಚಾಲ್ತಿ ಇದ್ದ ಸಾಲಗಳಿಗೂ ಸಹ ದಿ: 01–04–2012 ರಿಂದ ಅನ್ವಯವಾಗುತ್ತದೆ. ಸದರಿ ಯೋಜನೆಯಲ್ಲಿ 2011–12ನೇ ಸಾಲಿನಲ್ಲಿ ರೂ. 3.00 ಲಕ್ಷದವರೆಗೆ ಸಾಲ ಪಡೆದ 1627666 ರೈತರು ಹಾಗೂ 2012–13 (ಜೂನ್) ವರೆಗೆ ರೂ.1.00 ಲಕ್ಷಕ್ಕಿಂತ ಹೆಚ್ಚಿಗೆ ಮತ್ತು ರೂ. 3.00 ಲಕ್ಷದವರೆಗೆ ಸಾಲ ಪಡೆದ 85760 ರೈತರು ಲಾಭ ಪಡೆದಿರುತ್ತಾರೆ.

ಈ ಯೋಜನೆಯಡಿಯಲ್ಲಿ ನೀಡಲಾಗುವ ಗರಿಷ್ಠ ಮೊತ್ತದ ಸಾಲ ರೂ. 3.00 ಲಕ್ಷವಾಗಿರುತ್ತದೆ.

(ಆ) ಮೇಲ್ಕಂಡ ಅವಧಿಯಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುವಾರು ಯೋಜನೆಯ ಲಾಭ ಪಡೆದ ರೈತರ ವಿವರ:

ಕ್ರ.ಸಂ.	ಜಿಲ್ಲೆಯ ವಿವರ	2011–12	2012–13 ದಿನಾಂಕ: 30.06.2012ಕ್ಕೆ
1	ಬೆಂಗಳೂರು	57991	0
2	ತುಮಕೂರು	49499	54
3	ಕೋಲಾರ ಮತ್ತು ಚಿಕ್ಕಬಳ್ಳಾಪುರ	7555	0
4	ಚಿತ್ರದುರ್ಗ	29028	17
5	ದಾವಣಗೆರೆ	52785	22
6	ಶಿವಮೊಗ್ಗ	56182	1787
7	ಮೈಸೂರು ಮತ್ತು ಚಾಮರಾಜನಗರ	40046	3000
8	ಮಂಡ್ಯ	62339	305
9	ಹಾಸನ	61416	66
10	ಚಿಕ್ಕಮಗಳೂರು	20646	8125
11	ಕೊಡಗು	32102	9815
12	ದಕ್ಷಿಣ ಕನ್ನಡ	80312	27704
13	ಬಳ್ಳಾರಿ	45399	809
14	ಬೀದರ	119836	77
15	ಗುಲ್ಬರ್ಗಾ	79153	618
16	ರಾಯಚೂರು	95380	8484
17	ಬೆಳಗಾವಿ	289774	16384
18	ವಿಜಾಪೂರ	138003	396
19	ಬಾಗಲಕೋಟೆ	162131	2531
20	ಧಾರವಾಡ	89286	78
21	ಶಿರಸಿ	57903	5488
	ಒಟ್ಟು	**1626766**	**85760**

ಮೇಲಿನ ಯೋಜನೆಯಲ್ಲಿ ಭಾಲ್ಕಿ ತಾಲ್ಲೂಕಿನ ವಿಧಾನಸಭಾ ಕ್ಷೇತ್ರದಲ್ಲಿ 2011–12ರಲ್ಲಿ 27658 ಸದಸ್ಯರು ಮತ್ತು 2012–13ರಲ್ಲಿ 23 ಸದಸ್ಯರು ಸಾಲ ಸೌಲಭ್ಯ ಪಡೆದುಕೊಂಡಿರುತ್ತಾರೆ.

(ಇ) ಶೇಕಡಾ 1ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು 01–04–2011ರಿಂದ 30–6–2012ರವರೆಗೆ ರೂ.13818.75 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಸಹಕಾರಿ ಸಂಸ್ಥೆಗಳು ರಿಯಾಯಿತಿ ಬಡ್ಡಿ ದರದಲ್ಲಿ ನೀಡುವ ಸಾಲದ ಮೇಲೆ ರಾಜ್ಯ ಸರ್ಕಾರ ಬಡ್ಡಿ ಸಹಾಯಧನ ನೀಡುತ್ತಿದ್ದು, ಅಪೆಕ್ಸ್ ಬ್ಯಾಂಕ್ ಯಾವುದೇ ವೆಚ್ಚವನ್ನು ಮಾಡಿರುವುದಿಲ್ಲ.

ದಿನಾಂಕ: 01–04–2012 ರಿಂದ ರೂ. 1.00 ಲಕ್ಷದವರೆಗೆ ನೀಡುವ ಸಾಲವನ್ನು ಬಡ್ಡಿ ರಹಿತವಾಗಿ ನೀಡುವ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ದಿನಾಂಕ:01.04.2012 ರಿಂದ 30.06.2012ರ ವರೆಗೆ ಲಾಭ ಪಡೆದುಕೊಂಡಿರುವ ರೈತರ ವಿವರ ಇಂತಿದೆ.

ಕ್ರ.ಸಂ.	ಜಿಲ್ಲೆಯ ಹೆಸರು	ರೈತರ ಸಂಖ್ಯೆ
1	ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ	6127
2	ತುಮಕೂರು	6102
3	ಕೋಲಾರ ಮತ್ತು ಚಿಕ್ಕಬಳ್ಳಾಪುರ	405
4	ಚಿತ್ರದುರ್ಗ	2473
5	ದಾವಣಗೆರೆ	7292
6	ಶಿವಮೊಗ್ಗ	53185
7	ಮೈಸೂರು	13176
8	ಚಾಮರಾಜನಗರ	1907
9	ಮಂಡ್ಯ	7045

10	ಹಾಸನ	1846
11	ಚಿಕ್ಕಮಗಳೂರು	11600
12	ಕೊಡಗು	15943
13	ದಕ್ಷಿಣ ಕನ್ನಡ	31749
14	ಉಡುಪಿ	8995
15	ಬಳ್ಳಾರಿ	10382
16	ಬೀದರ	1570
17	ಗುಲ್ಬರ್ಗಾ	25907
18	ಯಾದಗಿರಿ	10777
19	ರಾಯಚೂರು	12384
20	ಕೊಪ್ಪಳ	2938
21	ಬೆಳಗಾವಿ	141726
22	ವಿಜಾಪೂರ	7354
23	ಬಾಗಲಕೋಟ	20848
24	ಧಾರವಾಡ	7876
25	ಗದಗ	4536
26	ಹಾವೇರಿ	8939
27	ಉತ್ತರ ಕನ್ನಡ	51098
	ಒಟ್ಟು	**474180**

ರೈತರು ಸಾಲ ಮರುಪಾವತಿಸಿದ ನಂತರ ಸಂಬಂಧಿಸಿದ ಸಹಕಾರಿ ಸಂಸ್ಥೆಗೆ ಸರ್ಕಾರ ಬಡ್ಡಿ ಸಹಾಯಧನವನ್ನು ಬಿಡುಗಡೆ ಮಾಡುತ್ತದೆ. ಶೂನ್ಯ ಬಡ್ಡಿ ದರದಲ್ಲಿ ವಿತರಿಸಿದ ಸಾಲಗಳನ್ನು ಮರುಪಾವತಿಸಲು 2013–14ರ ಗಡುವನ್ನು ನಿಗದಿಪಡಿಸಲಾಗಿದೆ. ರೈತರು ಸಕಾಲದಲ್ಲಿ ಸಾಲ ಮರುಪಾವತಿಸಿದರೆ ಈ ಯೋಜನೆಯನ್ನು ಜಾರಿಗೊಳಿಸಲು ಅಂದಾಜು ರೂ. 688.00 ಕೋಟಿಗಳ ವೆಚ್ಚ ಸರ್ಕಾರಕ್ಕೆ ಆಗುತ್ತದೆ. ಅಪೆಕ್ಸ್ ಬ್ಯಾಂಕಿಗೆ ಯಾವುದೇ ವೆಚ್ಚ ಆಗುವುದಿಲ್ಲ.